**<u>ಸಾಕ್ಷಿಯನ್ನು ದಿಃ 23.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ-</u>**

ಈ ದಾವೆಯಲ್ಲಿ ಯಾವುದೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ವೆ ನಂ. 19/ಪಿ7 ಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಜಮೀನು ಪ್ರಸ್ತುತ ಈಗ ರಂಗರಾಜು ರವರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನು ರಂಗರಾಜು ರವರಿಗೆ ಸೇರಿತ್ತು ಎಂದು ತೋರಿಸಲು ಕಂದಾಯ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಿಪಿ. 2 ರ ಅಗ್ರಿಮೆಂಟ್ ಅನ್ನು ತಯಾರು ಮಾಡುವ ಪೂರ್ವದಲ್ಲಿ ಯಾವ ದಾಖಲೆ ಆಧಾರದ ಮೇಲೆ ತಯಾರಿಸಲಾಗಿದೆ ಎಂದರೆ ಸಾಕ್ಷಿ ಸಾಗುವಳಿ ಚೀಟಿ ಆಧಾರದ ಮೇಲೆ ತಯಾರಿಸಲಾಗಿದೆ ಎನ್ನುತ್ತಾರೆ. ಸದರಿ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಗುವಳಿ ಚೀಟಿ ಯನ್ನು ಹಾಜರು ಪಡಿಸಿಲ್ಲ ಎನ್ನುತ್ತಾರೆ.

ನಿಪಿ. 1 ರ ಜಿ.ಪಿ.ಎ ಅನ್ನು ಎದುರು ಪಾರ್ಟಿ ರವರು ತಯಾರು ಮಾಡಿಸಿದ್ದರು. ಸದರಿ ಜಿ.ಪಿ.ಎ ಅನ್ನು ನನ್ನ ಮಗ ಬರೆದು ಕೊಟ್ಟಿದ್ದು ಆತ ಸಹಿ ಮಾಡಿರುತ್ತಾನೆ. ಸದರಿ ಜಿ.ಪಿ.ಎ ಅನ್ನು ಅನ್ನು ಎದುರು ಪಾರ್ಟಿ ರವರು ಹೇಳಿ ಬರೆಸಿದ್ದಾರೆ ಎಂದು ತಪ್ಪಾಗಿ ಹೇಳಿದ್ದು, ಅದನ್ನು ನನ್ನ ಮಗ ಬರೆಸಿರುತ್ತಾನೆ. ಜಿ.ಪಿ.ಎ ಅನ್ನು ವಕೀಲರ ಕಛೇರಿಯಲ್ಲಿ ತಯಾರು ಮಾಡಲಾಗಿದೆ. ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಜಿ.ಪಿ.ಎ ನಲ್ಲಿ ದಾವೆ ಸಂಖ್ಯೆ 245/2022 ಸಾಕ್ಷಿ ನುಡಿಯುವಂತೆ ಅಧಿಕಾರ ಕೊಟ್ಟಿರುವುದಾಗಿ ಬರೆಸಲಾಗಿದೆ. ನಿಪಿ. 1 ಅನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿದ್ದೇನೆ. ಸದರಿ ಜಿ.ಪಿ.ಎ ನಲ್ಲಿ ಓ.ಎಸ್ ಸಂಖ್ಯೆಯನ್ನು ನಮೂದು ಮಾಡಲಾಗಿದೆಯೊ ಇಲ್ಲವೊ ನನಗೆ ಹೇಳಲು ಆಗುವುದಿಲ್ಲ. ಪ್ರಸ್ತುತ ದಾವೆಯಲ್ಲಿ ಸಾಕ್ಷಿ ನುಡಿಯುವಂತೆ ನಿಖರವಾಗಿ ಬರೆದಿಲ್ಲ ಎಂದರೆ ನನಗೆ ಅದು ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ನನಗೆ ಸಾಕ್ಷಿ ಹೇಳಲು ಅಧಿಕಾರ ಇಲ್ಲ, ಅದಕಾರಣ ನಿಪಿ. 1 ಕಾನೂನು ರೀತಿ ಊರ್ಜಿತ ವಲ್ಲ ಎಂದರೆ ಸರಿಯಲ್ಲ.

ನನ್ನ ಮಗ ವಾದಿ ಪ್ರಸ್ತುತ ಬೆಂಗಳೂರಿನಲ್ಲಿ ವಾಸವಿರುತ್ತಾನೆ. ಅವನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೆ ತೊಂದರೆ ಇಲ್ಲ. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಿಪಿ. 1 ರಲ್ಲಿ ನಮೂದು ಆಗಿದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಆದಕಾರಣ ಅದು ಕಾನೂನು ಅಡಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಜಿ.ಪಿ.ಎ ಅನ್ನು ಏನೇಲ್ಲಾ ಅವಶ್ಯಕ ಅಂಶಗಳನ್ನು ಬರೆಸಬೇಕೆಂದು ವಿಷಯ ನನಗೆ ತಿಳಿದಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಜಿ.ಪಿ.ಎ ಗೆ ಯಾವುದೆ ಅಧೀಕೃತ ನೋಟರಿಗಳ ಸೀಲ್ ಆಗಲಿ ಸಹಿ ಆಗಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ.2 ರ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ನನಗೆ ಯಾವುದೆ ವ್ಯಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ತಯಾರು ಮಾಡುವಾಗ ನಾನು ಹಾಜರಿದ್ದೆ. ಅದನ್ನು ಮೈಸೂರಿನ ವಕೀಲರ ಕಛೇರಿಯಲ್ಲಿ ಬರೆಸಲಾಗಿತ್ತು. ಮೈಸೂರಿನ ವಕೀಲರ ಕಛೇರಿಯಲ್ಲಿ ಬರೆಸಿದ ಬಗ್ಗೆ ನಿಪಿ. 2 ರಲ್ಲಿ ಒಕ್ಕಣೆ ಇರುವುದಿಲ್ಲ. ನಿಪಿ. 2 ರ ಕರಾರು ಪತ್ರದ ಬಗ್ಗೆ ನನಗೆ ಯಾವುದೆ ವ್ಯಯಕ್ತಿಕ ಮಾಹಿತಿ ಇಲ್ಲದ ಕಾರಣ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಅರ್ಹನಲ್ಲ ಎಂದರೆ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನನ್ನ ಮಗ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಅರ್ಹನಿದ್ದರೂ ಸಹ ಉದ್ದೇಶ ಪೂರ್ವಕವಾಗಿ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಏನೇಲ್ಲಾ ಬರವಣಿಗೆ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದ ಪತ್ರದ 6 ನೇ ಪ್ಯಾರಾದಲ್ಲಿ ಹೇಳಿದಂತೆ ವಾದಿ ಪೆನ್ಸಿಂಗ್ ಮಾಡಿದ್ದರು ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ದಾವಾ ಸ್ವತ್ತಿನ ಸ್ವಾಧೀನ ಬಿಟ್ಟುಕೊಟ್ಟಿದ್ದರು. ನಿಪಿ. 2 ರ ಕರಾರು ಪತ್ರದ ಒಕ್ಕಣೆಯನ್ನು ನಾನು ತಿಳಿದುಕೊಂಡಿದ್ದೇನೆ. ರಿಜಿಸ್ಟರ್ ಸೇಲ್ ಅಗ್ರಿಮೆಂಟ್ ಪ್ರಕಾರ ಸ್ವಾಧೀನ ಬಿಟ್ಟುಕೊಟ್ಟಿದ್ದರು ಎಂದು ಹೇಳುತ್ತಿದ್ದೇನೆ. ನಿಪಿ. 2 ರಂತೆ ಸ್ವಾಧೀನ ಬಿಟ್ಟುಕೊಟ್ಟಿದ್ದರು ಎಂದು ಹೇಳಿ ಬರೆಸಲಾಗಿದೆ.ಸಾಕ್ಷಿ ಸದರಿ ದಾಖಲೆ ನೋಡಿ ಪರಿಶೀಲಿಸಿ ಅಂತಹ ದಾಖಲೆ ಇಲ್ಲ ಎನ್ನುತ್ತಾರೆ.

ನಿಪಿ. 18 ರಂತೆ 65 ಬಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಇರುವ ಸಹಿ ನನ್ನದೆ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪೋಟೊ ತೆಗೆಯಲಾಗಿದೆ ಎಂಬ ಬಗ್ಗೆ ನಮೂದು

ಮಾಡಿಲ್ಲ. ನಿಪಿ. 8 ರಿಂದ 17 ರ ಪೋಟೊಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ಪೋಟೊಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ. 18 65 ಬಿ. ಪ್ರಮಾಣ ಪತ್ರದಲ್ಲಿ ಪೋಟೊ ಯಾರು ತೆಗೆಯಲಾಗಿತ್ತು ಮತ್ತು ಎಲ್ಲಿ ತೆಗೆಯಲಾಗಿತ್ತು ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.